# ಮನಸೆಳೆವ ‘ತೀರ್ಥ ಕಲಶ’

ಬದಾಮಿ ತಾಲ್ಲೂಕಿನ, ದಕ್ಷಿಣ ಕಾಶಿ ಎಂದೇ ಪ್ರಸಿದ್ಧವಾದ ಮಹಾಕೂಟ ಪುರಾತನ ದೇವಾಯಲಯಗಳ ಮಹಾ ಕೂಟವಾಗಿದೆ. ಇಲ್ಲಿ ಮಹಾ ಕೂಟೇಶ್ವರ ಆರಾಧ್ಯ ದೈವ. ಸುಂದರ ವನಸಿರಿಯ ಮಧ್ಯದಲ್ಲಿ ಇರುವ ದೇವಸ್ಥಾನ ಅನೇಕ ಋಷಿಮುನಿಗಳು ತಪಗೈದ ಪವಿತ್ರ ಕ್ಷೇತ್ರ ಇದಾಗಿದೆ. ಇಲ್ಲಿಯ ತೀರ್ಥವು ಬಹಳ ಪ್ರಸಿದ್ಧಿಯನ್ನು ಪಡೆದಿದೆ. ಮಹಾಕೂಟೇಶ್ವರ ಮಹಾಲಿಂಗದ ದರ್ಶನ ನಂತರ ಭಕ್ತರಿಗೆ ಪ್ರಸಾದ, ತೀರ್ಥ ನೀಡುವ ‘ತೀರ್ಥ ಕಲಶ’ (ತೀರ್ಥ ಗಿಂಡಿ) ಬಹಳ ಆಕರ್ಷಕವಾಗಿದೆ. ಕುಳಿತ ನಂದಿಯ ಆಕಾರವನ್ನು ಹೊಂದಿದ ಈ ಗಿಂಡಿಯಿಂದ ನಂದಿಯ ಮುಖದಿಂದ ಬೀಳುವ ತೀರ್ಥ ಭಕ್ತರನ್ನು ಇನ್ನಷ್ಟು ಭಕ್ತಿ ಪರವಶರನ್ನಾಗಿ ಮಾಡುತ್ತದೆ. ಹಲವಾರು ದಶಕಗಳಿಂದ ಈ ತೀರ್ಥ ಗಿಂಡಿ ತನ್ನ ಕಾಯಕವನ್ನು ಮಾಡುತ್ತಿದೆ.

**■ ಕೆ.ಪಿ. ರಾಮಗುಂಡಿ, ಬೈಲಹೊಂಗಲ**





# ಜಡೆಕಳ್ಳಿ

ಸಸ್ಯಶಾಸ್ತ್ರದಲ್ಲಿ ಯುಪರ್ಬಿಯೇಸಿ (Wperbiacese) ಜಾತಿಗೆ ಸೇರಿದ ಕಳ್ಳಿ (Cactus)ಯನ್ನು ಮರುಭೂಮಿ ಸಸ್ಯವೆಂದೇ ಕರೆಯುತ್ತಾರೆ. ಇದಕ್ಕೆ ಎಲೆಗಳಿಲ್ಲ, ಬರೀ ಮುಳ್ಳುಗಳನ್ನೇ ಹೊಂದಿರುವ ಹಸಿರು ಕಾಂಡವೇ ಎಲೆಯ ಕೆಲಸ ನಿರ್ವಹಿಸುತ್ತದೆ. ಅಲ್ಪಸ್ವಲ್ಪ ಬಿದ್ದ ಮಳೆಯ ನೀರನ್ನೆಲ್ಲಾ ತಮ್ಮ ಕಾಂಡಗಳಲ್ಲೇ ಶೇಖರಿಸಿಕೊಂಡು ಅಭಾವ ಪರಿಸ್ಥಿತಿಯಲ್ಲಿ ಅದನ್ನು ಬಳಸಿ ಬದುಕುವ ಸಾಮರ್ಥ್ಯ ಇವುಗಳದ್ದಾಗಿದೆ. ಹಸಿರ ಕಾಂಡಗಳು ಪಾಪಾಸುಕಳ್ಳಿಯಲ್ಲಿ ಎಲೆಯಂತೆ, ಜಡೆಕಳ್ಳಿಯಲ್ಲಿ ತಿರುಗಿದ ಜಡೆಯಂತೆ (ಮೂರು ಮೂಲೆ), ಕವಲು ಕವಲು ಮರದಂತೆ ಕಂಡು ಬರುತ್ತವೆ. ಇವು ಸುಂದರವಾದ ಹೂ ಬಿಟ್ಟರೂ ಸುವಾಸನೆ ಇಲ್ಲ. ತಿಳಿ ನೇರಳೆ ಬಣ್ಣದ ಹಣ್ಣುಗಳು ತಿನ್ನಲು ಯೋಗ್ಯವಾಗಿದ್ದರೂ ಮುಳ್ಳುಮಯ, ಇವು ಅನೇಕ ಪೋಷಕಾಂಶಗಳನ್ನು ಹೊಂದಿವೆ. ರೈತರು ಇದನ್ನು ಬೇಲಿಯ ಗಿಡವಾಗಿ ಬೆಳೆಸುತ್ತಾರೆ.

**■ ಎಸ್. ಓಂಕಾರಯ್ಯ ತವನಿಧಿ, ದಾವಣಗೆರೆ**

# ಕಲೆಯ ಬಲೆ

ಹೆಂಚಿನ ಮನೆಯ ಮಾಡಿನಲ್ಲಿ ತೂಗಾಡುತ್ತಿದ್ದ ಒಂದು ಗೇಣುದ್ದದ ಹಗ್ಗದಲ್ಲಿ ನೋಡ ನೋಡುತ್ತಿದ್ದಂತೆ ಒಣ ಹುಲ್ಲಿನ ಎಸಳುಗಳು, ತೆಳುವಾದ ಮರದ ತೊಗಟೆಗಳು, ಎಲೆಗಳು ಪವಾಡದ ರೀತಿಯಲ್ಲಿ ಅಂಟಿಕೊಳ್ಳುತ್ತಿದ್ದವು. ಯಾರಿದರ ಕರ್ತಾರ ಎಂದು ಆಶ್ಚರ್ಯವಾಯಿತು. ಇದು ಗುಬ್ಬಿಗಿಂತಲೂ ಚಿಕ್ಕ ಹಕ್ಕಿಯ ಕೆಲಸವಾಗಿತ್ತು. ಬರೀ ಪುಟ್ಟ ಕೊಕ್ಕಿನಿಂದ ಎಷ್ಟೆಲ್ಲಾ ಚಮತ್ಕಾರ.

ಕೆಲವೇ ದಿನಗಳಲ್ಲಿ ಪುಟ್ಟದೊಂದು ಗೂಡು ತಯಾರಾಗಿ ಅದರಲ್ಲಿ ಎರಡು ಮೊಟ್ಟೆಗಳನ್ನೂ ಇಟ್ಟಿತು. ತನ್ನ ಸಂತಾನಾಭಿವೃದ್ಧಿಗಾಗಿ ಯಾವ ರೀತಿಯ ತಯಾರಿ ಮಾಡಿಕೊಂಡಿತ್ತು ಎಂಬುದು ಊಹಿಸಲೂ ಅಸಾಧ್ಯ. ಅದರ ಕಲೆಯ ಚಮತ್ಕಾರ ಯಾವ ಕಲಾವಿದನ ಕುಂಚದ ಅಂದಾಜಿಗೂ ಸಿಗುವಂತಹದ್ದಲ್ಲ. ಗೂಡು ಕೂಡ ಸೂಕ್ಷ್ಮವಾಗಿ ಗಮನಿಸಿದರೆ ಒಂದು ಹಕ್ಕಿಯ ಆಕಾರದಲ್ಲಿಯೇ ಇತ್ತು. ಮೊಟ್ಟೆ ದೊಡ್ಡದಾಗಿ ಮರಿಗಳಾಗುತ್ತಿದ್ದಂತೆ ಹೆಣ್ಣು ಗಂಡು ಹಕ್ಕಿಗಳೆರಡೂ ಅವುಗಳಿಗೆ ಗುಟುಕು ಕೊಡುತ್ತಿದ್ದುದು ವಿಶೇಷ. ಅವುಗಳನ್ನು ಕಾಯಲು ಯಾವಾಗಲೂ ಹತ್ತಿರದಲ್ಲಿದ್ದ ಒಂದು ಮರದ ಮೇಲೆ ಕುಳಿತುಕೊಂಡಿರುತ್ತಿದ್ದವು.

**■ ಪುಷ್ಪಾ ಎನ್.ಕೆ. ರಾವ್, ಉಡುಪಿ**

